

ಗುರುಸ್ವಾಮಿ ಇನ್ನೇನು ಬೀಡಿ ಹಚ್ಚಬೇಕು ಅಷ್ಟರಲ್ಲಿ ಕಿರಿಮಗನ ಕೂಸು ಸ್ಲೇಟುಬಳಪದ ಬ್ಯಾಗಿನ ಸಮೇತ ತನ್ನ ಕಡೆಗೆ ಓಡುತ್ತ ಬರುತ್ತಿರುವುದನ್ನು ಕಂಡು ಮನಸ್ಸೆಲ್ಲ ತುಂಬಿ ಬಂತು. ಅದನ್ನು ಬಾಚಿ ತಬ್ಬಿಕೊಂಡು ಮುತ್ತಿಟ್ಟ. ಮೊಮ್ಮಗನ ದನಿ ಕೇಳಿದ ಅಜ್ಜಿ ಕೂಡ ಹೊರಗೆ ಬಂದು ಮೊಮ್ಮಗನನ್ನು ಮುದ್ದಿಸಿದಳು. ಅಷ್ಟರಲ್ಲಿ ಅದೆಲ್ಲಿದ್ದಳೋ ಕಿರಿಸೊಸೆ ಬರಬರನೆ ಬಂದು ಮಗನಿಗೆ ರಪ ರಪ ಎರಡು ಬಿಟ್ಟು 'ಇಸ್ಕೂಲಿಗೆ ವತ್ತಾಗತೆ, ವ್ಯಾನು ಬಂದು ಆರನ್ ಮಾಡ್ತೈತೆ, ನೀನು ಬಂದು ಇಲ್ಲಿ ಕೂತಿದ್ದೀಯಾ' ಎಂದು ದರದರನೆ ಎಳೆದುಕೊಂಡು ಹೋದಳು. ಅದು ಊರೆಲ್ಲ ಕೇಳುವ ಹಾಗೆ ಅಳುತ್ತಾ ಹೋತು. ಗುರುಸ್ವಾಮಿಗೂ ಅವನ ಹೆಂಡರಿಗೂ ಏನು ಹೇಳಲೂ ತೋಚಲಿಲ್ಲ. ಅಜ್ಜಿ ಕಣ್ಣತುಂಬ ನೀರು ತುಂಬಿಕೊಂಡು ಒಳಕ್ಕೆ ಹೋತು. ಗುರುಸ್ವಾಮಿಗೆ ಇವ್ಯಾಕಿಂಗೆ ಆಡ್ತವೋ ಕಾಣೆನಲ್ಲ ಎನ್ನಿಸಿತು.

ಹಾಗೆ ನೋಡಿದರೆ ಅಷ್ಟಾಗಿ ಗುರುಸ್ವಾಮಿದು ಅಂತಾ ಬಂಗದ ಬಾಳೇನಲ್ಲ. ಒಂದಿಷ್ಟು ಬಡ್ಡಿವ್ಯವಹಾರವೂ ಇತ್ತು. ಅವನೂ ಬಲೇ ಲೆಕ್ಕಾಚಾರದ ಮನುಷ್ಯ. ಅಷ್ಟಾಗಿ ಯಾರನ್ನೂ ಹತ್ತಿರಕ್ಕೆ ಬಿಟ್ಟುಕೊಂಡವನಲ್ಲ. ಇಬ್ಬರು ಗಂಡುಮಕ್ಕಳಾದ ಮೇಲೆ ಕೊನೆಯವಳಾಗಿ ನಿಮ್ಮಿ ಹುಟ್ಟಿದ್ದಳು. ನಿಮ್ಮಿಯ ಮೇಲೆ ಎಲ್ಲರಿಗೂ ಬಲೇ ಅಕ್ಕರೆ. ಗುರುಸ್ವಾಮಿಗಂತೂ ಜೀವ. ದೊಡ್ಡಮಗ ಮಾದೇಶನ ಮದುವೆ ಮಾಡಿ ಮರಾ ತೋಪಡ ಹೊಡೆಯುವ ಕಾರ್ಖಾನೆ ನೋಡಿಕೊಳ್ಳಲು ಬಿಟ್ಟಿದ್ದ. ಎರಡನೆಯವನಾದ ಶಿವಲಿಂಗ ಅಷ್ಟು ಸುಲಭಕ್ಕೆ ನಿಯಂತ್ರಣಕ್ಕೆ ಬರುವಂತೆ ಕಾಣಲಿಲ್ಲ. ಮದುವೆ ಮಾಡಿದರೆ ಸರಿಯಾಗ್ತನೆ ಅಂತ ಹೊಸ ಸಂಬಂಧ ಮಾಡಿ ಸಕಲೇಶಪುರದಿಂದ ಹೆಣ್ಣುತಂದು ಮದುವೆ ಮಾಡಿದ್ದ. ಅಲ್ಲೀವರೆಗೆ ಎಲ್ಲ ಸರಿಯಾಗಿದ್ದದ್ದು ಬರಬರುತ್ತಾ ಎಲ್ಲ ಕೈತಪ್ಪಿ ಹೋಗಲಾರಂಭಿಸಿತು. ಹೊಸನೆಂಟರು ರಾಜಕಾರಣದಲ್ಲಿದ್ದವರು. ಅಳಿಯನನ್ನೂ ಜಿಲ್ಲಾಪಂಚಾಯಿತಿ ಚುನಾವಣೆಗೆ ನಿಲ್ಲಿಸಿದರು. ಸುಮಾರು ದುಡ್ಡು ಕೈಬಿಟ್ಟಿತು. ಆದರೂ ಗೆಲ್ಲಲಿಲ್ಲ. ಚಿನಾಹಳ್ಳಿಗೆ ಹೊಂದಿಕೊಂಡಂಗೇ ಎರಡೆಕರೆ ಜಮೀನಿತ್ತು. ಅದನ್ನು ಸೈಟುಗಳನ್ನಾಗಿ ವಿಂಗಡಿಸಿ ಮಾರುವುದರಿಂದ ಲಕ್ಷಾಂತರ ದುಡ್ಡು ಮಾಡಬಹುದು ಎಂದು ಅಪ್ಪನನ್ನೂ ಕೇಳದ